# ಬಾಲಿವುಡ್‌ನಲ್ಲಿ ಸನ್ನಿ !



ಬಾಲಿವುಡ್‌ಗೆ ಸನ್ನಿ ಹಿಡಿದಿದೆ. ಅದು ಸನ್ನಿ ಲಿಯೋನಳ ಸನ್ನಿ! ಹಾಲಿವುಡ್‌ನಿಂದ ಹಾರಿ ಬಂದ 'ಪಾರ್ನ್ ತಾರೆ' (ಕನ್ನಡದಲ್ಲಿ ಬೆತ್ತಲೆ ತಾರೆ ಎನ್ನಬಹುದೆ?) ಸನ್ನಿ ಲಿಯೋನ್ ಈಗ ಬಾಲಿವುಡ್ ಚಿತ್ರಗಳಲ್ಲಿ ನಟಿಸಲೂ ತಯಾರಾಗಿದ್ದಾಳೆ. 'ಬಿಗ್ ಬಾಸ್' ಟೀವಿ ಷೋಗೆ ಅತಿಥಿಯಾಗಿ ಬಂದ ಈಕೆ, ವೀಕ್ಷಕರ ಸಂಖ್ಯೆ ಹೆಚ್ಚಿಸುವಲ್ಲಿ ಯಶಸ್ವಿಯಾಗಿದ್ದಾಳಂತೆ. ಅಮೆರಿಕಾದಲ್ಲಿ ಈಕೆ ನಟಿಸಿರುವ ವಯಸ್ಕರ ನೀಲಿ ಚಿತ್ರಗಳು ಭರದಿಂದ ಮಾರಾಟವಾಗುತ್ತವೆ. ಅದನ್ನೇ ಧ್ಯಾನಿಸಿಕೊಂಡು ಭಾರತೀಯ ಟೀವಿ ವೀಕ್ಷಕರೂ ಟೀವಿ ಮುಂದೆ ಕುಳಿತಿದ್ದಾರೆ!

ಹಾಗೆ ನೋಡಿದರೆ ಈ ಸನ್ನಿ ಭಾರತೀಯ ಮೂಲದವಳೇ. ಈಕೆ ಜನಿಸಿದ್ದು ಕೆನಡಾದಲ್ಲಿ ಸಿಖ್ ದಂಪತಿಗೆ. ಒರಿಜಿನಲ್ ಹೆಸರು ಕರೆನ್ ಮಲ್ಹೋತ್ರಾ! ನೀಲಿ ಚಿತ್ರಗಳಿಗಾಗಿಯೇ ಲಿಯೋನೆ ಎಂದು ಈಕೆಗೆ ಮರುನಾಮಕರಣ ಮಾಡಲಾಯಿತು.

ಈಕೆ ಟೀವಿ ಷೋಗೆ ಎಂಟ್ರಿಯಾದ ಬಳಿಕ ಎಲ್ಲ ಮಾಧ್ಯಮಗಳಲ್ಲೂ ಈಕೆಯದ್ದೇ ಸುದ್ದಿ– ಚಿತ್ರವಿಚಿತ್ರ ಫೋಟೋ ಭಂಗಿ! 'ನಾನು 18ರ ಹರೆಯದಲ್ಲೇ ಬೈಸೆಕ್ಸುವಲ್ ಆದೆ. ಆದರೆ ನನಗೆ ಈಗಲೂ ಗಂಡಸರನ್ನು ಕಂಡರೆ ಹೆಚ್ಚು ಪ್ರೀತಿ' ಎಂದು ಬಿಡುಬೀಸಾಗಿ ಹೇಳಿ ಈಕೆ ಈಗಾಗಲೆ ಷೋನಲ್ಲಿ ಭಾಗವಹಿಸುವವರಿಗೂ ಬಿಸಿ ಮುಟ್ಟಿಸಿದ್ದಾಳೆ. ಈಕೆಯನ್ನು ನಿಯಂತ್ರಣದಲ್ಲಿ ಇಡಲು ಈಕೆಯ ಹೆತ್ತವರು ಕೆಥೋಲಿಕ್ ಶಾಲೆಗೆ ಸೇರಿಸಿದರಂತೆ. ಆದರೆ ಈಕೆ ನರ್ಸ್ ಶಿಕ್ಷಣ ಪಡೆಯುವಾಗ ಅರ್ಧದಲ್ಲೆ ಶಿಕ್ಷಣ ತೊರೆದು ಮಾಡೆಲಿಂಗ್ ಮತ್ತು ನೀಲಿ ಚಿತ್ರಗಳ ರಂಗಕ್ಕೆ ಧುಮುಕಿದಳು. ಈಗಾಗಲೆ ಬಾಲಿವುಡ್ ನಿರ್ಮಾಪಕರೊಬ್ಬರು ಈಕೆಯ ಜತೆ ಹೊಸ ಚಿತ್ರಕ್ಕೆ ಸಹಿ ಹಾಕಿದ್ದಾರಂತೆ.

'ನನಗೂ ಮದುವೆಯಾಗಿ ಸಂಸಾರ ನಡೆಸುವ ಆಸೆ ಇದೆ. ಇನ್ನೊಂದೆರಡು ವರ್ಷಗಳ ಬಳಿಕ ಮದುವೆಯಾಗುತ್ತೇನೆ' ಎಂದಿದ್ದಾಳೆ ಈ 31ರ ಹರೆಯದ ಸುಂದರಿ.

■ **ಬಿಂದು**

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65

